ದಿನಾಂಕ ಃ 22-09-2021 ಒಎಸ . ನಂ.240 /2013

ಡಿ. ಡಬ್ಲ್ಯೂ - 6

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆ ಃ ಶ್ರೀ ಕೆಎಸಕೆ 4 ನೇ ಪ್ರತಿವಾದಿ ಪರ ವಕೀಲರಿಂದ</u>

ಈ ದಿನ ನಾನು ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳ ಬಗ್ಗೆ ಮಾಹಿತಿ ಇರುತ್ತದೆ. ಸಾಕ್ಷಿ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿದ್ದು ಅದನ್ನು ನಾನು ಓದಿ ತಿಳಿದುಕೊಂಡ ನಂತರ ಅದಕ್ಕೆ ಸಹಿ ಮಾಡಿರುತ್ತೇನೆ.

ಸಾಕ್ಷಿಯನ್ನು ಡಿಡಬ್ಲೂ 6 ಎಂದು ವಿಚಾರಣೆ ಮಾಡಲಾಯಿತು.
ಸಾಕ್ಷಿಯು ನಿಡಿ.38 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ.38(ಸಿ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ</u> ಶ್ರೀ ಆರಎಸಕೆ ವಾದಿಪರ ವಕೀಲರಿಂದಃ

ನಾನು ದ್ವಿತೀಯ ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. 2017-18 ರಲ್ಲಿ ನನಗೆ ದಸ್ತೂರಾಗಿ ಇರಲು ಪರವಾನಿಗೆ ಇರುತ್ತದೆ. ನನ್ನ ಪರವಾನಿಗೆ ನಂ.22/2005-2006 ಆಗಿರುತ್ತದೆ. ನನ್ನ ಲೈಸನ್ಸನ್ನು ನ್ಯಾಯಾಲಯಕ್ಕೆ ಹಾಜರುಮಾಡಲು ತೊಂದರೆ ಇರುವುದಿಲ್ಲ. ನಾನು 2005 -2006 ರಿಂದ ದಸ್ತೂರನಾಗಿ ಕೆಲಸ ನಿರ್ವಹಿಸುತ್ತಿರುತ್ತೇನೆ. ನಾವು ಪ್ರತಿನಿತ್ಯ ಆದ ಪತ್ರಬರವಣಿಗೆಯನ್ನು ನಮ್ಮ ರೆಜಿಸ್ಟರದಲ್ಲಿ ನಮೂದು ಮಾಡುತ್ತೇವೆ ಎಂದರೆ ಸರಿ. ಯಾವುದೇ ಒಂದು ದಾಖಲೆಯನ್ನು ತಯಾರು ಮಾಡುವ ಮುಂಚೆ ಆ ದಾಖಲೆಗೆ ಸಂಬಂದಿಸಿದ ಆಸ್ತಿಯ ಸಂಬಂದ ವಿಚಾರದ ಬಗ್ಗೆ ಯಾವುದಾದರೂ ಪ್ರಕರಣ ಇದೆಯಾ ಎಂದು ಪರಿಶೀಲನೆ ಮಾಡುತ್ತೇನೆ. ಸದರಿ ವಿಷಯದ ಸಂಬಂದವಾಗಿ ನ್ಯಾಯಾಲಯದಲ್ಲಿ ಪ್ರಕರಣವು ಬಾಕಿ ಇದ್ದರೆ ಅದಕ್ಕೆ ಸಂಬಂದಿಸಿದಂತೆ ದಾಖಲೆಯನ್ನು ತೆಗೆದುಕೊಂಡು ಬನ್ನಿ ಎಂದು ಹೇಳುತ್ತೇವೆ ಎಂದರೆ ಸರಿ. ಒಂದು ವೇಳೆ ನ್ಯಾಯಾಲಯದಲ್ಲಿ ದಾವೆ ಇದ್ದರೆ ದಾಖಲೆಗಳನ್ನು ನನ್ನ ಮುಂದೆ ಹಾಜರುಪಡಿಸುವುದಿಲ್ಲ ಎಂದರೆ ಸರಿ. ಪಹಣಿ ಪತ್ರಿಕೆಯಲ್ಲಿ ಅವರ ಅಣ್ಣ ತಮ್ಮಂದಿರ ಹೆಸರು ನಮೂದು

ಇದ್ದರೆ ಅವರೆಲ್ಲರ ಒಪ್ಪಿಗೆ ಬೇಕೆಂದು ಸೂಚಿಸುತ್ತೀರಿ ಎಂದರೆ ಸರಿ. ವಿಭಾಗ ಆದ ಬಗ್ಗೆ ವಿಭಾಗ ಪತ್ರವನ್ನು ನಾನು ನೋಡುವುದಿಲ್ಲ. ನನ್ನ ಪ್ರಕಾರ ಪಹಣಿಯಲ್ಲಿ ಯಾರ ಹೆಸರು ನಮೂದು ಇರುತ್ತದೆಯೋ ಅವರೇ ಮಾಲೀಕರು ಇರುತ್ತಾರೆ. ನಾನು ನೊಂದಣಿ ಅಧಿನಿಯಮವನ್ನು ಓದಿರುತ್ತೇನೆ. ಆಸ್ತಿಯ ಬೆಲೆ 100/- ರೂ.ಗಳಿಗಿಂತ ಹೆಚ್ಚಿಗೆ ಇದ್ದರೆ ಏನು ಮಾಡಬೇಕೆಂದು ಗೊತ್ತಿದಿಯಾ ಎಂದರೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

2017 ನೇ ಇಸವಿಯಲ್ಲಿ ವಾದಿ ಮತ್ತು ಪ್ರತಿವಾದಿ 2 ಮತ್ತು 4 ರವರು ಸಬರೆಜಿಸ್ಟರ ಕಚೇರಿಯ ಹತ್ತಿರ ಬಂದಿರುತ್ತಾರೆ. ಆ ದಿನ ಸುಮಾರು 10.30 ಗಂಟೆಗೆ ಬಂದಿರುತ್ತಾರೆ. ವಾದಿ, ಪ್ರತಿವಾದಿ 2 ಮತ್ತು 4 ರವರ ಜೊತೆ ಸಾಕ್ಷಿದಾರರು ಬಂದಿದ್ದರು ಆದರೆ ಅವರ ಹೆಸರು ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಗೆ ಸಂಬಂದಿಸಿದಂತೆ ನನ್ನ ಸಮಕ್ಷಮ ಯಾವುದೇ ಖರೀದಿ ಮಾತುಕತೆ ಆಗಿರುವುದಿಲ್ಲ. ಹಣದ ವ್ಯವಹಾರ ನನ್ನ ಸಮಕ್ಷಮ ಆಗಿರುತ್ತದೆ. ದಾವಾ ಆಸ್ತಿಗೆ ಸಂಬಂದಿಸಿದಂತೆ ಪತ್ರಬರೆಯುವ ಸಮಯದಲ್ಲಿ ನಾನು ಪಹಣಿಯನ್ನು ನೋಡಿರುತ್ತೇನೆ. 2 ನೇ ಪ್ರತಿವಾದಿಯು 2017 ನೇ ಇಸವಿಯ ಪಹಣಿ ಪತ್ರಿಕೆಯನ್ನು ನನಗೆ ನೀಡಿರುತ್ತಾನೆ. ಸದರಿ ಪಹಣಿ ಪತ್ರಿಕೆಯಲ್ಲಿ 2 ನೇ ಪ್ರತಿವಾದಿಯ ಹೆಸರು ಮಾತ್ರ ಇರುತ್ತದೆ. ದಾವಾ ಆಸ್ತಿಗೆ ಸಂಬಂದಿಸಿದಂತೆ ಡೈರಿಗಳನ್ನು ನೋಡಿರುವುದಿಲ್ಲ. ಆಸ್ತಿಯು 2 ನೇ ಪ್ರತಿವಾದಿಗೆ ಯಾವ ಮೂಲದಿಂದ ಬಂದಿರುತ್ತದೆ ಎಂದು ತಿಳಿದುಕೊಳ್ಳುವ ಪ್ರಯತ್ನ ಮಾಡಿರುವುದಿಲ್ಲ. 2 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಸ್ವಯಾರ್ಜಿತವಾಗಿ ಖರೀದಿಸಿರುತ್ತೇನೆ ಎಂದು ಹೇಳಿದ್ದನಾ ಎಂದರೆ ಇಲ್ಲ ಎಂದು ನುಡಿಯುತ್ತಾನೆ. 2 ನೇ ಪ್ರತಿವಾದಿಯನ್ನು ನಾನು ನ್ಯಾಯಾಲಯದಲ್ಲಿ ದಾವಾ ಆಸ್ತಿಗೆ ಸಂಬಂದಿಸಿದಂತೆ ಯಾವುದಾದರೂ ಪ್ರಕರಣಗಳು ಇವೆ ಎಂದು ಕೇಳಿರುತ್ತೇನೆ ಆದರೆ ಸದರಿ 2 ನೇ ಪ್ರತಿವಾದಿಯು ಇಲ್ಲ ಎಂದು ನುಡಿದಿರುತ್ತಾರೆ. ನೊಂದಣಾಧಿಕಾರಿ ಕಚೇರಿಯಲ್ಲಿ ನ್ಯಾಯಾಲಯದಲ್ಲಿ ಸ್ಥಗಿತ ಆದೇಶ ಆಗಿರುವ ಬಗ್ಗೆ ವಿಚಾರ ಮಾಡಿರುತ್ತೇನೆ. ವಾದಿಯು ನ್ಯಾಯಾಲಯದಲ್ಲಿ ದಾವೆ ಮಾಡಿ ದಾವಾ ಆಸ್ತಿಗಳನ್ನು ಯಾರಿಗೂ ಪರಬಾರೆ ಮಾಡಬಾರದು ಎಂದು ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ತೆಗೆದುಕೊಂಡು ನೊಂದಣಾಧಿಕಾರಿ ಕಚೇರಿಯಲ್ಲಿ ಸಲ್ಲಿಸಿರುತ್ತಾನೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾವು ನೊಂದಣಾಧಿಕಾರಿ ಕಚೇರಿಯಲ್ಲಿ ವಿಚಾರ ಮಾಡಿ ಅವರು ಯಾವುದೇ ನಿರ್ಬಂಧಕಾಜ್ಞೆ ಆದೇಶ ಇರುವುದಿಲ್ಲ ಎಂದು ಹೇಳಿರುತ್ತಾರೆ. 2013 ನೇ ಇಸವಿಯಲ್ಲಿ ವಾದಿಯು ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ತೆಗೆದುಕೊಂಡಿರುತ್ತಾನೆ ಅದು ಸಬರೆಜಿಸ್ಟರ ಆಫೀಸನಲ್ಲಿ ಇರುವುದನ್ನು ನಮಗೆ ಗೊತ್ತಿದ್ದರೂ ಸಹಾ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಖರೀದಿ ಪತ್ರಕ್ಕೆ 2 ನೇ ಪ್ರತಿವಾದಿಯು ಮಾಹಿತಿ ನೀಡಿರುತ್ತಾನೆ. ನಿಡಿ. 38 ರಲ್ಲಿರುವ ಚಕಬಂದಿಗೆ ನಾನು ಯಾವುದೇ ದಾಖಲೆಯನ್ನು ನೋಡಿರುವುದಿಲ್ಲ ಆದರೆ 2 ನೇ ಪ್ರತಿವಾದಿಯು ಹೇಳಿರುವುದನ್ನು ಬರೆದುಕೊಂಡಿರತ್ತೇನೆ. ಖರೀದಿ ಪತ್ರವನ್ನು ಮಾಡುವ ಸಮಯದಲ್ಲಿ 11 ಇ ಸ್ಕೇಚನ್ನು ಹಾಜರುಪಡಿಸಿರುವುದಿಲ್ಲ. ಯಾವುದೇ ಒಂದು ಖರಿದಿ ಪತ್ರವನ್ನು ಬರೆಯುವಂತಹ ಸಮಯದಲ್ಲಿ 11 ಇ ಸ್ಕೇಚ ಅವಶ್ಯಕತೆ ಇರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಒಂದೇ ಸರ್ವೆ ನಂತರ ಇದ್ದರೆ ಅವಶ್ಯಕತೆ ಇರುವುದಿಲ್ಲ ಪೈಕಿ ಇದ್ದರೆ ಬೇಕಾಗುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಸರ್ವೆ ನಂ. 95/2 ಕ್ಕೆ 2 ನೇ ಪ್ರತಿವಾದಿಯು ತಪ್ಪು ಮಾಹಿತಿ

ನೀಡಿರುತ್ತಾನೆ ಎಂದರೆ ಸರಿಯಲ್ಲ. ನಾನು ಮಾಹಿತಿ ತೆಗೆದುಕೊಂಡು ಖರೀದಿ ಪತ್ರವನ್ನು ಬರೆದಿರುತ್ತೇನೆ. ಎಷ್ಟುಗಂಟೆಗೆ ಮಾಹಿತಿ ಕೊಟ್ಟರು ಎನ್ನುವುದು ನನಗೆ ನೆನಪಿರುವುದಿಲ್ಲ. ಖರೀದಿ ಪತ್ರವನ್ನು ತಯಾರು ಮಾಡುವುದಕ್ಕೆ ಎಷ್ಟು ಸಮಯ ಹಿಡಿದಿತ್ತು ಎನ್ನುವುದು ನನಗೆ ಗೊತ್ತಿರುವುದಿಲ್ಲ. ಖರೀದಿ ಪತ್ರವನ್ನು ನೊಂದಾವಣಿ ಮಾಡಿಸುವುದಕ್ಕೆ ನೊಂದಣಿ ಕಚೇರಿಯಲ್ಲಿ ಬೆಳಿಗ್ಗೆ 11.30 ಗಂಟೆ ಸುಮಾರಿಗೆ ನೀಡಿರುತ್ತೇವೆ. ಖರೀದಿ ಪತ್ರಕ್ಕೆ ನಮ್ಮ ಕಚೇರಿಯಲ್ಲಿ ನನ್ನ ಸಮಕ್ಷಮ ಖರೀದಿ ಕೊಟ್ಟವರು, ಖರೀದಿ ಹಿಡಿದವರು ಹಾಗೂ ಎಲ್ಲ ಸಾಕ್ಷಿದಾರರ ಸಹಿಯನ್ನು ತೆಗೆದುಕೊಂಡಿರುತ್ತೇನೆ. ಖರೀದಿಕೊಟ್ಟವನು ಅನಕ್ಷರಸ್ಥನಾಗಿರುತ್ತಾನೆ ಹಾಗೂ ಹೆಬ್ಬೆಟ್ಟಿನ ಗುರುತಿನ ಸಹಿಯನ್ನು ಮಾಡಿರುತ್ತಾನೆ ಆ ಹೆಬ್ಬೆಟ್ಟಿನ ಸಹಿಯನ್ನು ನಾನು ಗುರುತಿಸಿರುತ್ತೇನೆ. ನಿಡಿ.38 ರಲ್ಲಿ ನನ್ನ ಸಮಕ್ಷಮ ಹೆಬ್ಬೆಟ್ಟಿನ ಸಹಿಯನ್ನು ಮಾಡಿರುತ್ತಾನೆ ಎನ್ನುವ ಒಕ್ಕಣೆಯು ಇರುವುದಿಲ್ಲ. 2 ನೇ ಪ್ರತಿವಾದಿಯ ಹೆಂಡತಿಯ ಹೆಸರು ದಾವಾ ಆಸ್ತಿಯ ಪಹಣಿಯಲ್ಲಿ ನಮೂದು ಇದೆಯಾ ಎನ್ನುವ ಪ್ರಶ್ನೆಗೆ ಇಲ್ಲ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯ ಹೆಂಡತಿಯು ದಾವಾ ಆಸ್ತಿಯಲ್ಲಿ ನಾನು ಕೂಡಾ ಮಾಲೀಕಳು ಎಂದು ಯಾವುದೇ ದಾಖಲಾತಿಯನ್ನು ನೀಡಿರುವುದಿಲ್ಲ. ಯಾವ ಆದಾರದ ಮೇಲೆ ನಿಡಿ -38 ಕ್ಕೆ 2 ನೇ ಪ್ರತಿವಾದಿಯ ಹೆಂಡತಿಯ ಸಹಿಯನ್ನು ತೆಗೆದುಕೊಂಡಿದ್ದೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು 2 ನೇ ಪ್ರತಿವಾದಿಯು ನನ್ನ ಹೆಂಡತಿಗೂ ಕೂಡ ಹಕ್ಕು ಇದೆ ಎಂದಕಾರಣ ಸಹಿಯನ್ನು ತೆಗೆದುಕೊಂಡಿರುತ್ತೇನೆ. 11.30 ಗಂಟೆಗೆ ಖರೀದಿ ಪತ್ರದ ನೊಂದಣಿ ಶುಲ್ಕವನ್ನು ತುಂಬಿರುತ್ತೇವೆ. 8 ಲಕ್ಷ 40 ಸಾವಿರ ರೂಗಳನ್ನು 4 ನೇ ಪ್ರತಿವಾದಿಯು 2 ನೇ ಪ್ರತಿವಾದಿಗೆ ನೀಡಿರುತ್ತಾರೆ. ಎಷ್ಟು ಮುಖ ಬೆಲೆಯ ನೋಟುಗಳು ಇದ್ದವು ಎಂದು ನನಗೆ ಗೊತ್ತಿರುವುದಿಲ್ಲ. ಖರೀದಿ ಪತ್ರಕ್ಕೆ ಸಹಿ ಮಾಡುವುದಕ್ಕೆ ನೊಂದಣಿ ಕಚೇರಿಗೆ ಬಂದಿರುತ್ತಾರೆ. ನೊಂದಣಿ ಕಚೇರಿಯಲ್ಲಿ ಖರೀದಿ ಪತ್ರಕ್ಕೆ ಸಹಿ ಹಾಗೂ ಪೋಟೋವನ್ನು ಎಷ್ಟು ಗಂಟೆಗೆ ತೆಗೆದುಕೊಂಡರು ಎಂದರೆ ನನಗೆ ನೆನಪಿರುವುದಿಲ್ಲ ಎಂದು ನುಡಿದಿರುತ್ತಾರೆ. ಖರೀದಿ ಪತ್ರಕ್ಕೆ ಸಾಕ್ಷಿ ಹಾಕಿದವರ ಹೆಸರು ಮತ್ತು ಊರುಗಳನ್ನು ಕೇಳಿರುವುದಿಲ್ಲ. ದಾವಾ ಆಸ್ತಿಯನ್ನು 4 ನೇ ಪ್ರತಿವಾದಿಗೆ ಖರೀದಿ ದಿವಸದಂದೇ ಸ್ವಾ ದೀನಕ್ಕೆ ಕೊಟ್ಟಿರುತ್ತೇವೆ ಎಂದು ಹೇಳಿರುತ್ತಾರೆ ಆದರೆ ನನ್ನ ಸ್ವಂತಕ್ಕೆ ಮಾಹಿತಿ ಇರುವುದಿಲ್ಲ. ನ್ಯಾಯಾಲಯದಲ್ಲಿ ದಾವೆ ಚಾಲ್ತಿಯಲ್ಲಿಇರುವುದು ನನಗೆ ಗೊತ್ತಿದ್ದರೂ 2 ಮತ್ತು 4 ನೇ ಪ್ರತಿವಾದಿಯರ ಜೊತೆ ಶೇರಿಕಾಗಿ ವಾದಿಗೆ ಮೋಸ ಮಾಡಬೇಕೆಂಬ ಉದ್ದೇಶದಿಂದ ಈ ಖರೀದಿ ಕಾಗದ ಪತ್ರವನ್ನು ತಯಾರಿಸಿರುತ್ತೀರಿ ಎಂದರೆ ಸರಿಯಲ್ಲ. ವಾದಿ ಮತ್ತು 2 ನೇ ಪ್ರತಿವಾದಿಯು ಅಣ್ಣ ತಮ್ಮಂದಿರು ಇರುತ್ತಾರೆ ಮತ್ತು ಡೈರಿ ಉತಾರದಲ್ಲಿ ಸದರಿಯವರು ಹೆಸರುಗಳು ನಮೂದು ಇದ್ದರೂ ಸಹಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ಸಹಾಯ ಮಾಡಲೆಂದು ಖರೀದಿ ಪತ್ರವ್ಯವಹಾರವು ನನ್ನ ಸಮಕ್ಷಮ ಆಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ಸಂಪೂರ್ಣ ಮಾಲೀಕನು ಇರದೇ ಇದ್ದರೂ ಸಹಾ ಕೊಟ್ಟಿಯಾಗಿ ಖರೀದಿ ಪತ್ರವನ್ನು ತಯಾರು ಮಾಡಿರುತ್ತೇನೆಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಹೆ ಪ್ರ ದ ನ್ಯಾ ದಂ ನ್ಯಾ ಬೈಲಹೊಂಗಲ